# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 06.

ಸಂಖ್ಯೆ:ಕರಾಮುವಿ/ಪವಿ/5.1/ಯು.ಜಿ.ಪಿ.ಜಿ/ಪ/09/2023-24 ದಿನಾಂಕ:-18-07-2023

## ಪರಿಷ್ಕೃತ ಪರೀಕ್ಷಾ ಅಧಿಸೂಚನೆ

**ವಿಷಯ:- 2013-14, 2014-15 ಮತ್ತು 2018-19ನೇ ಶೈಕ್ಷಣಿಕ ಸಾಲಿನಿಂದ 2021-22ನೇ ಶೈಕ್ಷಣಿಕ ಸಾಲಿನವರೆಗೆ (ಜುಲೈ/ಜನವರಿ ಆವೃತ್ತಿ) ಹಾಗೂ 2022-23 ನೇ ಸಾಲಿನಲ್ಲಿ (ಜುಲೈ ಆವೃತ್ತಿಯ) ಪ್ರವೇಶಾತಿ ಪಡೆದಿರುವ ಎಲ್ಲಾ ಸ್ನಾತಕ / ಸ್ನಾತಕೋತ್ತರ ಕಾರ್ಯಕ್ರಮಗಳ (UG/PG) ವಾರ್ಷಿಕ ವಿದ್ಯಾರ್ಥಿಗಳಿಗೆ ( NON CBCS) ಪರೀಕ್ಷಾ ಶುಲ್ಕ ಪಾವತಿಸುವ ಬಗ್ಗೆ.**

**ಉಲ್ಲೇಖ:- ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 12-07-2023 ಮತ್ತು 17-07-2023**

*****

ವಿಶ್ವವಿದ್ಯಾನಿಲಯದಲ್ಲಿ 2013-14, 2014-15 ಮತ್ತು 2018-19 ರಿಂದ 2021-22ನೇ ಶೈಕ್ಷಣಿಕ ಸಾಲಿನವರೆಗೆ (ಜುಲೈ/ಜನವರಿ ಆವೃತ್ತಿ) ಪ್ರವೇಶಾತಿ ಪಡೆದು ವಿವಿಧ ಕಾರ್ಯಕ್ರಮಗಳಲ್ಲಿ ಅನುತ್ತೀರ್ಣರಾಗಿರುವ/ ಪರೀಕ್ಷೆ ತೆಗೆದುಕೊಂಡಿಲ್ಲದ ವಿದ್ಯಾರ್ಥಿಗಳಿಗೆ ಮತ್ತು 2022-23ನೇ ಶೈಕ್ಷಣಿಕ ಸಾಲಿನಲ್ಲಿ (ಜುಲೈ ಆವೃತ್ತಿ) ವಾರ್ಷಿಕ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದಿರುವ ಸ್ನಾತಕ/ಸ್ನಾತಕೋತ್ತರ ಕಾರ್ಯಕ್ರಮಗಳ (UG/PG) ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಪಾವತಿಸಲು ಅಧಿಸೂಚನೆ ಹೊರಡಿಸಲಾಗಿದೆ. **(ಸೆಮಿಸ್ಟರ್ ಕಾರ್ಯಕ್ರಮಗಳ ವಿದ್ಯಾರ್ಥಿಗಳನ್ನು ಹೊರತುಪಡಿಸಿ ವಾರ್ಷಿಕ ವಿದ್ಯಾರ್ಥಿಗಳಿಗೆ ಮಾತ್ರ)**

- 2013-14, 2014-15 ಮತ್ತು 2018-19 ನೇ ಶೈಕ್ಷಣಿಕ ಸಾಲಿನಿಂದ 2021-2022ನೇ ಶೈಕ್ಷಣಿಕ ಸಾಲಿನವರೆಗೆ (ಜುಲೈ / ಜನವರಿ ಆವೃತ್ತಿ) ಪ್ರವೇಶಾತಿ ಪಡೆದಿರುವ ಸ್ನಾತಕ ಕಾರ್ಯಕ್ರಮಗಳಾದ ಪ್ರಥಮ, ದ್ವಿತೀಯ ಮತ್ತು ತೃತೀಯ **ಬಿ.ಎ/ಬಿ.ಕಾಂ** ಪದವಿಗಳಲ್ಲಿ ಅನುತ್ತೀರ್ಣ/ ಪರೀಕ್ಷೆ ತೆಗೆದುಕೊಂಡಿಲ್ಲದ ವಿದ್ಯಾರ್ಥಿಗಳು ಹಾಗು 2020-21 ಮತ್ತು 2021-2022ನೇ ಸಾಲಿನಲ್ಲಿ (ಜುಲೈ ಆವೃತ್ತಿ) ಪ್ರವೇಶಾತಿ ಪಡೆದಿರುವ **ಬಿ.ಲಿಬ್.ಐ.ಎಸ್ಸಿ** ಕಾರ್ಯಕ್ರಮಗಳ ಅನುತ್ತೀರ್ಣ/ ಪರೀಕ್ಷೆ ತೆಗೆದುಕೊಂಡಿಲ್ಲದ ವಿದ್ಯಾರ್ಥಿಗಳು
- 2022-23ನೇ ಶೈಕ್ಷಣಿಕ ಸಾಲಿನಲ್ಲಿ (ಜುಲೈ ಆವೃತ್ತಿ) ಪ್ರವೇಶಾತಿ ಪಡೆದಿರುವ ಸ್ನಾತಕ ಪದವಿ ಕಾರ್ಯಕ್ರಮಗಳಾದ ಪ್ರಥಮ, ದ್ವಿತೀಯ ಮತ್ತು ತೃತೀಯ **ಬಿ.ಎ /ಬಿ.ಕಾಂ /ಬಿ.ಲಿಬ್.ಐ.ಎಸ್ಸಿ** ವಾರ್ಷಿಕ ಕಾರ್ಯಕ್ರಮಗಳ ವಿದ್ಯಾರ್ಥಿಗಳು **(Fresh Students).**
- 2013-14, 2014-15 ಮತ್ತು 2018-19ನೇ ಶೈಕ್ಷಣಿಕ ಸಾಲಿನಿಂದ 2021-2022ನೇ ಸಾಲಿನಲ್ಲಿ (ಜುಲೈ ಆವೃತ್ತಿ) ಪ್ರವೇಶಾತಿ ಪಡೆದಿರುವ **ಎಂ.ಎ/ಎಂ.ಕಾಂ** ಕಾರ್ಯಕ್ರಮಗಳ ಪ್ರಥಮ ಮತ್ತು ಅಂತಿಮ ವರ್ಷದ ಅನುತ್ತೀರ್ಣ/ ಪರೀಕ್ಷೆ ತೆಗೆದುಕೊಂಡಿಲ್ಲದ ವಾರ್ಷಿಕ ಕಾರ್ಯಕ್ರಮದ ವಿದ್ಯಾರ್ಥಿಗಳು **( NON CBCS)**
- 2022-2023ನೇ ಸಾಲಿನ (ಜುಲೈ ಆವೃತ್ತಿ) ಕಾರ್ಯಕ್ರಮಗಳ ಪ್ರಥಮ ಮತ್ತು ಅಂತಿಮ ವರ್ಷದ **ಎಂ. ಎ** ವಿದ್ಯಾರ್ಥಿಗಳು (ಸಾರ್ವಜನಿಕ ಆಡಳಿತ, ಉರ್ದು, ಸಂಸ್ಕೃತ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಹಾಗು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ) **( NON CBCS Fresh Students).**
- 2018-19ನೇ ಶೈಕ್ಷಣಿಕ ಸಾಲಿನಿಂದ 2020-2021ನೇ ಸಾಲಿನವರೆಗೆ (ಜುಲೈ/ಜನವರಿ ಆವೃತ್ತಿ) ಪ್ರವೇಶಾತಿ ಪಡೆದಿರುವ **ಎಂ.ಲಿಬ್.ಐ.ಎಸ್ಸಿ** ವಾರ್ಷಿಕ ಕಾರ್ಯಕ್ರಮದ ಅನುತ್ತೀರ್ಣ/ ಪರೀಕ್ಷೆ ತೆಗೆದುಕೊಂಡಿಲ್ಲದ ವಿದ್ಯಾರ್ಥಿಗಳು **( NON CBCS)**
- 2020-21 (ಜುಲೈ/ಜನವರಿ ಆವೃತ್ತಿ) ಹಾಗು 2021-22ನೇ ಶೈಕ್ಷಣಿಕ ಸಾಲಿನಲ್ಲಿ (ಜುಲೈ ಆವೃತ್ತಿ) ಪ್ರವೇಶಾತಿ ಪಡೆದ ಸ್ನಾತಕ /ಸ್ನಾತಕೋತ್ತರ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕಾರ್ಯಕ್ರಮಗಳ ಅನುತ್ತೀರ್ಣ/ ಪರೀಕ್ಷೆ ತೆಗೆದುಕೊಂಡಿಲ್ಲದ ವಿದ್ಯಾರ್ಥಿಗಳು ಹಾಗು 2022-23ನೇ ಶೈಕ್ಷಣಿಕ ಸಾಲಿನ (ಜುಲೈ ಆವೃತ್ತಿ) ವಿದ್ಯಾರ್ಥಿಗಳು (Fresh Students).

ಪರೀಕ್ಷಾ ಶುಲ್ಕ ಪಾವತಿಸುವ ದಿನಾಂಕಗಳು ಮತ್ತು ಪಾವತಿಸಬೇಕಾಗಿರುವ ಶುಲ್ಕದ ವಿವರಗಳು ಈ ಕೆಳಕಂಡಂತಿದ್ದು, ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್ **www.ksoumysuru.ac.in**ನಲ್ಲಿ ಪರೀಕ್ಷಾ ಅರ್ಜಿ ಮತ್ತು ಪರೀಕ್ಷಾ ಶುಲ್ಕವನ್ನು ಎಲ್ಲ ಅಗತ್ಯ ವಿವರಗಳೊಂದಿಗೆ ಭರ್ತಿಮಾಡಿ ಕಡ್ಡಾಯವಾಗಿ ಅಂತರ್ಜಾಲದ (Online) ಮೂಲಕವೇ ಸಲ್ಲಿಸುವುದು. ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸುವಾಗ ತೊಂದರೆಗಳು ಎದುರಾದಲ್ಲಿ ಆನ್‌ಲೈನ್ ಸಹಾಯವಾಣಿ ಸಂಖ್ಯೆ **8690544544/ 8800335638** ಯನ್ನು ಸಂಪರ್ಕಿಸುವುದು.

| | |
|---|---|
| ಪರೀಕ್ಷಾ ಶುಲ್ಕ ಪಾವತಿಸುವ ಪ್ರಾರಂಭದ ದಿನಾಂಕ : | 17-07-2023 |
| ದಂಡ ಶುಲ್ಕವಿಲ್ಲದೆ ಪಾವತಿಗೆ ಕಡೆ ದಿನಾಂಕ : | 14-08-2023 |
| ರೂ. 200/- ದಂಡ ಶುಲ್ಕದೊಂದಿಗೆ ಪಾವತಿಗೆ ಕಡೆ ದಿನಾಂಕ: | 24-08-2023 |

**ಸದರಿ ಪರೀಕ್ಷೆಗಳನ್ನು ದಿನಾಂಕ: 04-09-2023 ರಿಂದ ಪ್ರಾರಂಭಿಸಲಾಗುವುದು.**

| | |
|---|---|
| **ಬಿ.ಎ/ಬಿ.ಕಾಂ ಹಾಗೂ ಎಂ.ಎ/ಎಂ.ಕಾಂ ವಾರ್ಷಿಕ ಕಾರ್ಯಕ್ರಮಗಳು ಬಿ.ಲಿಬ್.ಐ.ಎಸ್ಸಿ/ ಎಂ.ಲಿಬ್.ಐ.ಎಸ್ಸಿ ಸ್ನಾತಕ/ಸ್ನಾತಕೋತ್ತರ ಡಿಪ್ಲೋಮಾ ಕಾರ್ಯಕ್ರಮಗಳು** | **ಬಾಗಲಕೋಟೆ, ಬೆಂಗಳೂರು-1, ಚಾಮರಾಜನಗರ, ಹಾಸನ, ಮಂಗಳೂರು, ಉಡುಪಿ, ಕಾರವಾರ, ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಧಾರವಾಡ, ಬೆಳಗಾವಿ, ಕಲಬುರ್ಗಿ, ಅಂಗಸೂಗೂರು, ಮೂಡಬಿದಿರೆ, ಬೈಂದೂರು, ರಾಯಚೂರು, ಸಿರಿವಾರ, ಕಾಳಗಿ, ಮೈಸೂರು, ಮಂಡ್ಯ, ತುಮಕೂರು, ಕೋಲಾರ. ರಾಮನಗರ, ಪುತ್ತೂರು, ಮಡಿಕೇರಿ, ಚಿಕ್ಕೋಡಿ, ಶಿರಸಿ, ಗದಗ, ಯಾದಗಿರಿ, ವಿಜಯಪುರ 1 & 2, ಬೀದರ್. ಅಥಣಿ, ಘಟಪ್ರಭಾ, ಹುಮ್ನಾಬಾದ್ (ಘಾಟ್‌ಬೋರಲ್ಲಾ), ಮೂಡಲಗಿ (ಬೆಳಗಾವಿ) ಹಾರೋಗೆರಿ (ಬೆಳಗಾವಿ), ಹಿರೇಕೆರೂರು (ಹಾವೇರಿ)** |

Scanned with OKEN Scanner

## ವಿದ್ಯಾರ್ಥಿಗಳು ಪಾವತಿಸಬೇಕಾಗಿರುವ ಪರೀಕ್ಷಾ ಶುಲ್ಕಗಳ ಕೋಷ್ಟಕ

### ಸ್ನಾತಕ/ ಸ್ನಾತಕೋತ್ತರ (U.G/P.G) ಪದವಿ ಕೋರ್ಸ್‌ಗಳು

| ಕ್ರಮ ಸಂಖ್ಯೆ | ಕಾರ್ಯಕ್ರಮಗಳು | ಪೂರ್ಣಪರೀಕ್ಷೆಗೆ | ಒಂದು ಪತ್ರಿಕೆಗೆ | ಎರಡು ಪತ್ರಿಕೆಗೆ | ಮೂರು ಪತ್ರಿಕೆಗೆ | ನಾಲ್ಕು ಪತ್ರಿಕೆಗೆ | ಐದು ಪತ್ರಿಕೆಗೆ | ಐದು ಮತ್ತು ಅದಕ್ಕೂ ಹೆಚ್ಚಿನ ಪತ್ರಿಕೆಗಳಿಗೆ |
|---|---|---|---|---|---|---|---|---|
| 01 | ಬಿ.ಎ/ಬಿ.ಕಾಂ | ಪ್ರಥಮ ವರ್ಷ- 1100<br>ದ್ವಿತೀಯ ವರ್ಷ-1100<br>ತೃತೀಯ ವರ್ಷ-1200 | 600 | 650 | 800 | 900 | ----- | ಪ್ರಥಮ & ದ್ವಿತೀಯ ವರ್ಷಕ್ಕೆ - 1100<br>ತೃತೀಯ ವರ್ಷಕ್ಕೆ - 1200 |
| 02 | ಎಂ.ಎ/ಎಂ.ಕಾಂ (NON CBCS) | ವಾರ್ಷಿಕ ಪರೀಕ್ಷೆ- 1500 | 650 | 900 | 1500 | 1500 | 1500 | 1500 |
| 03 | ಬಿ.ಲಿಬ್.ಐ.ಎಸ್ಸಿ | 2000 | 800 | 1000 | 1300 | 1500 | 1800 | 2000 |
| 04 | ಎಂ.ಲಿಬ್.ಐ.ಎಸ್ಸಿ | 2000 | 800 | 1000 | 1250 | 1500 | 1800 | 2000 |
| 05 | ಸ್ನಾತಕ/ಸ್ನಾತಕೋತ್ತರ ಡಿಪ್ಲೋಮಾಗಳು | 1100 | 500 | 700 | 1100 | 1100 | 1100 | - |
| 06 | ಡಿಪ್ಲೋಮಾ (ಡಿ.ಐ.ಜಿ) | 1000 | 500 | 700 | 1000 | 1000 | - | - |
| 06 | ಸರ್ಟಿಫಿಕೇಟ್‌ಕಾರ್ಯ ಕ್ರಮಗಳು | 900 | - | - | - | - | - | - |

### ವಿದ್ಯಾರ್ಥಿಗಳಿಗೆ ಸೂಚನೆಗಳು

1. ವಿದ್ಯಾರ್ಥಿಗಳು ಕಡ್ಡಾಯವಾಗಿ ಮೇಲ್ಕಂಡ ಪರೀಕ್ಷಾ ಕೇಂದ್ರಗಳಲ್ಲಿ ಒಂದು ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳಬೇಕು.
2. ವಿದ್ಯಾರ್ಥಿಯು ಆನ್‌ಲೈನ್ ಮೂಲಕವೇ ಶುಲ್ಕವನ್ನು ಪಾವತಿಸಬೇಕು ಹಾಗೂ ಪಾವತಿಸಿದ ಒಂದು ಅರ್ಜಿಯ ಪ್ರತಿಯನ್ನು ಹೊಂದಿರತಕ್ಕದ್ದು.
3. ವಿವಿ ನಿಲಯಕ್ಕೆ ನೇರವಾಗಿ / ಅಂಚೆ ಮೂಲಕ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.
4. ಪರೀಕ್ಷಾ ಶುಲ್ಕವನ್ನು ಯಾವ ಕಾರಣದಿಂದಲೂ ಮರುಪಾವತಿ ಮಾಡಲಾಗುವುದಿಲ್ಲ ಹಾಗೂ ಅದನ್ನು ಮುಂದಿನ ಪರೀಕ್ಷೆಗೆ ಮರುಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.
5. ನಿಗದಿ ಪಡಿಸಿದ ಪರೀಕ್ಷಾ ಕೇಂದ್ರಗಳಲ್ಲಿ 50ಕ್ಕಿಂತ ಕಡಿಮೆ ಇರುವ ವಿದ್ಯಾರ್ಥಿಗಳನ್ನು ಹತ್ತಿರದ ಪರೀಕ್ಷಾ ಕೇಂದ್ರಗಳಿಗೆ ವರ್ಗಾಹಿಸಲಾಗುವುದು
6. ವಿದ್ಯಾರ್ಥಿಗಳು ತಮ್ಮ ಸ್ನಾತಕೋತ್ತರ ಕಾರ್ಯಕ್ರಮಗಳ ವಿಷಯಕ್ಕೆ ಸಂಬಂಧಿಸಿದಂತೆ ಪರೀಕ್ಷಾ ಪ್ರವೇಶಾತಿ ಪತ್ರಗಳನ್ನು ಪರೀಕ್ಷೆಗಳು ಪ್ರಾರಂಭವಾಗುವ ಎರಡು ದಿನಗಳ ಮುಂಚೆ ವಿ.ವಿ. ನಿಲಯದ ಅಂತರ್ಜಾಲ **www.ksoumysuru.ac.in** ನಿಂದ ಪಡೆಯಬಹುದಾಗಿದೆ.
7. ಪರೀಕ್ಷಾ ಕೇಂದ್ರಗಳಿಗೆ ಮೊಬೈಲ್ ಫೋನ್ ತರುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಪರೀಕ್ಷಾ ಕೇಂದ್ರಗಳಿಗೆ ಮೊಬೈಲ್ ಫೋನ್ ತರುವುದು ದುರ್ನಡತೆ **(Malpractice)** ಯಾಗುತ್ತದೆ. ಅಂತಹ ವಿದ್ಯಾರ್ಥಿಗಳ ವಿರುದ್ಧ ಕ್ರಮ ಜರುಗಿಸಲಾಗುತ್ತದೆ.
8. **ವಿಶೇಷ ಸೂಚನೆ: ವಿಶ್ವವಿದ್ಯಾನಿಲಯವು ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪರೀಕ್ಷೆಗೆ ತರುವುದು.**
9. ಸಂಶೋಧನ ಪ್ರಬಂಧ ಮತ್ತು ಮೌಖಿಕ ಪರೀಕ್ಷೆ/ಪ್ರಾಯೋಗಿಕ ಪರೀಕ್ಷೆಯ ಬಗೆಗೆ ಸಂಬಂಧಿಸಿದ ವಿಭಾಗದ ಮುಖ್ಯಸ್ಥರನ್ನು ಸಂಪರ್ಕಿಸುವುದು.

ಸಹಿ/-

**ಕುಲಸಚಿವರು (ಪರೀಕ್ಷಾಂಗ)**

ಪ್ರತಿಗಳು.

1. ಮಾನ್ಯ ಕುಲಪತಿಗಳ ವಿಶೇಷ ಕರ್ತವ್ಯ ಅಧಿಕಾರಿಗಳು ಕರಾಮುವಿ, ಮೈಸೂರು.
2. ಮಾನ್ಯ ಕುಲಸಚಿವರ ಆಪ್ತಸಹಾಯಕರು, ಕರಾಮುವಿ, ಮೈಸೂರು.
3. ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು.
4. ಡೀನ್(ಶೈಕ್ಷಣಿಕ),ಕರಾಮುವಿ,ಮೈಸೂರು.
5. ಡೀನ್(ಅಧ್ಯಯನ ಕೇಂದ್ರ), ಕರಾಮುವಿ, ಮೈಸೂರು.
6. ಮುಖ್ಯಸ್ಥರು ಎಲ್ಲಾ ಅಧ್ಯಯನ ವಿಭಾಗಗಳು, ಕರಾಮುವಿ, ಮೈಸೂರು.
7. ಎಲ್ಲಾ ಪ್ರಾದೇಶಿಕ ನಿರ್ದೇಶಕರುಗಳು, ಕರಾಮುವಿ ಪ್ರಾದೇಶಿಕ ಕೇಂದ್ರಗಳು, ಕರಾಮುವಿ.
8. ನೋಡೆಲ್ ಅಧಿಕಾರಿಗಳು, ವೆಬ್‌ಸೈಟ್ ನಿರ್ವಹಣೆ, ಕರಾಮುವಿ. ವಿಶ್ವವಿದ್ಯಾನಿಲಯದ ಅಂತರ್‌ಜಾಲದಲ್ಲಿ ಪ್ರಕಟಿಸುವಂತೆ ಕ್ರಮವಹಿಸುವುದು.
9. ಉಪಕುಲಸಚಿವ/ಸಹಾಯಕ ಕುಲಸಚಿವರು/ಅಧೀಕ್ಷಕರು, ಕರಾಮುವಿ, ಮೈಸೂರು.
10. ಸಂಯೋಜನಾಧಿಕಾರಿಗಳು, ಕಲಿಕಾರ್ಥಿಗಳ ಕಲ್ಯಾಣ ಕೇಂದ್ರ, ಕರಾಮುವಿ, ಮೈಸೂರು
11. ಕಚೇರಿ ಪ್ರತಿ/ಸಂಬಂಧಿಸಿದ ಕಡತಕ್ಕೆ.

Scanned with OKEN Scanner